ಗುರುವಾರ, ಡಿಸೆಂಬರ್ 21, 2017 | ಮಂಗಳೂರು | ₹ 5.00 | ಸಂಪುಟ 19 | ಸಂಚಿಕೆ 351 | ಪುಟ 22 + 4 + 2 • www.prajavani.net f/prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

CENTRAL LIBRARY

ಕಾಮನಬಿಲ್ಲು ಇದು ಮೊಬೈಲ್ ಯುಗ ಸ್ವಾಮಿ...

ಲವ್ ಜಿಹಾದ್ ತಡೆಗೆ ಹಿಂದೂ ಕಾರ್ಯಪಡೆ 5

ಜನವರಿ ಎರಡನೇ ವಾರದಿಂದ ಶಿರಾಡಿ ರಸ್ತೆ ಬಂದ್ 7

| ಸೆನ್ಸೆಕ್ಸ್ | ನಿಫ್ಟಿ | ಚಿನ್ನ (Std. 10g) | ಶುದ್ಧ ಬೆಳ್ಳಿ (kg) | ₹/$ |
|---|---|---|---|---|
| 33,777 | 10,444 | ₹28,796 (ಬೆಂಗಳೂರು) | ₹37,600 (ಬೆಂಗಳೂರು) | 64.11 |

# ಅಖಿಲ ಭಾರತ ತಾಂತ್ರಿಕ ಶಿಕ್ಷಣ ಮಂಡಳಿ

(ಭಾರತ ಸರ್ಕಾರದ ಶಾಸನಬದ್ಧ ಅಂಗ)

ನೆಲ್ಸನ್ ಮಂಡೇಲಾ ಮಾರ್ಗ, ವಸಂತಕುಂಜ್, ನವದೆಹಲಿ – 110 070

ಫೋನ್ ನಂ. : 011–29581000, ವೆಬ್‌ಸೈಟ್ : www.aicte-india.org

## ಮಂಜೂರಾತಿ ಪ್ರಕ್ರಿಯೆ 2018–19 ಸಾರ್ವಜನಿಕ ಪ್ರಕಟಣೆ

**ಶೈಕ್ಷಣಿಕ ಅವಧಿ 2018–19 ಸಾಲಿಗೆ** ಮ್ಯಾನೇಜ್‌ಮೆಂಟ್ ಕೋರ್ಸ್‌ಗಳೂ ಸೇರಿದಂತೆ ಟೆಕ್ನಿಕಲ್ ಪ್ರೊಗ್ರಾಮ್ಸ್/ಕೋರ್ಸ್‌ಗಳನ್ನು ಕೈಗೊಳ್ಳಲಿರುವ, ಪ್ರಸ್ತುತ ಚಾಲ್ತಿಯಲ್ಲಿರುವ ಮತ್ತು ಉದ್ದೇಶಿತ ತಾಂತ್ರಿಕ ಶಿಕ್ಷಣ ಸಂಸ್ಥೆಗಳಿಂದ ಈ ಕೆಳಗಿನಂತೆ ಮಂಜೂರಾತಿಗಾಗಿ ಎಐಸಿಟಿಇ ರವರು ಅರ್ಜಿಗಳನ್ನು ಆಹ್ವಾನಿಸಿದ್ದಾರೆ:

(ಎ) "ಡಿಪ್ಲೋಮ/ಅಂಡರ್ ಗ್ರಾಜುಯುಏಟ್ ಡಿಗ್ರಿ/ಪೋಸ್ಟ್ ಗ್ರಾಜುಯೇಟ್ ಡಿಗ್ರಿ/ಪೋಸ್ಟ್ ಗ್ರಾಜುಯೇಟ್ ಡಿಪ್ಲೋಮ ಹಂತಗಳಲ್ಲಿ ಇಂಜನಿಯರಿಂಗ್ ಮತ್ತು ಟೆಕ್ನಾಲಜಿ/ಫಾರ್ಮಸಿ/ಆರ್ಕಿಟೆಕ್ಚರ್/ಪ್ಲಾನಿಂಗ್/ಅಪ್ಲಾಯ್ಡ್ ಆರ್ಟ್ಸ್ ಮತ್ತು ಕ್ರಾಫ್ಟ್ಸ್/ಹೊಟೇಲ್ ಮ್ಯಾನೇಜ್‌ಮೆಂಟ್ ಮತ್ತು ಕೇಟರಿಂಗ್ ಟೆಕ್ನಾಲಜಿ/ಮ್ಯಾನೇಜ್‌ಮೆಂಟ್/ಎಂಸಿಎ ಗಳಂತಹ ಟೆಕ್ನಿಕಲ್ ಪ್ರೊಗ್ರಾಮ್ಸ್ ನೀಡುವ, ವಿಶ್ವವಿದ್ಯಾಲಯ/ಮಂಡಳಿಯ ಜೊತೆಗೆ ಅಫಿಲಿಯೇಟ್ ಹೊಂದಿರುವ ನೂತನ ತಾಂತ್ರಿಕ ಶಿಕ್ಷಣ ಸಂಸ್ಥೆಗಳ ಸ್ಥಾಪನೆಗಾಗಿ" ಅರ್ಜಿ ಸಲ್ಲಿಸುವುದು.

ಹಿಂದಿನ ಶೈಕ್ಷಣಿಕ ವರ್ಷಗಳಲ್ಲಿ ಆರ್ಕಿಟೆಕ್ಚರ್ ಮಂಡಳಿಯಿಂದ ಮಂಜೂರಾತಿ ಪಡೆದಿರುವ ಶಿಕ್ಷಣ ಸಂಸ್ಥೆಗಳು/ಮೊದಲನೇ ಬಾರಿ ಎಐಸಿಟಿಇ ಇವರಿಂದ ಮಂಜೂರಾತಿ ಪಡೆಯಬಸುತ್ತಿರುವ ಎಂಸಿಎ/ಎಂಬಿಎ ಪ್ರೊಗ್ರಾಮ್ಸ್ ನೀಡುತ್ತಿರುವ ತಾಂತ್ರಿಕೇತರ ಶಿಕ್ಷಣ ಸಂಸ್ಥೆಗಳು, ಒಂದು-ಹೊಸ ತಾಂತ್ರಿಕ ಶಿಕ್ಷಣ ಸಂಸ್ಥೆ ಎಂಬ ರೀತಿಯಲ್ಲಿ ಅರ್ಜಿ ಸಲ್ಲಿಸುವುದು.

ಮೊದಲನೇ ಬಾರಿ ಎಐಸಿಟಿಇ ಇವರಿಂದ ಮಂಜೂರಾತಿ ಪಡೆಯಬಯಸುತ್ತಿರುವ ವಿಶ್ವವಿದ್ಯಾಲಯಗಳೆಂದು ಪರಿಗಣಿಸಬಹುದಾದ (ಮಾನ್ಯ ಸರ್ವೋಚ್ಚ ನ್ಯಾಯಾಲಯ ಹೊರಡಿಸಿದ ಆದೇಶ ಸಿಎ ನಂ. 17869–17870/2017 ದಿನಾಂಕ 03.11.2017ರ ಆದೇಶದ ಮೇರೆಗೆ) ಶಿಕ್ಷಣ ಸಂಸ್ಥೆಗಳು, ಒಂದು ಹೊಸ ತಾಂತ್ರಿಕ ಶಿಕ್ಷಣ ಸಂಸ್ಥೆ ಎಂಬ ರೀತಿಯಲ್ಲಿ ಅರ್ಜಿ ಸಲ್ಲಿಸುವುದು.

ಎಐಸಿಟಿಇ ಇವರಿಂದ ಮೊದಲನೇ ಬಾರಿ ಮಂಜೂರಾತಿ ಪಡೆಯಬಯಸುವ ವಿಶ್ವವಿದ್ಯಾಲಯ ವಿಭಾಗಗಳು/ಕಾನ್‌ಸ್ಟಿಟ್ಯುಯಂಟ್ ಕಾಲೇಜುಗಳು/ಖಾಸಗಿ ವಿಶ್ವವಿದ್ಯಾಲಯಗಳು, ಒಂದು ಹೊಸ ತಾಂತ್ರಿಕ ಶಿಕ್ಷಣ ಸಂಸ್ಥೆ ಎಂಬ ರೀತಿಯಲ್ಲಿ ಅರ್ಜಿ ಸಲ್ಲಿಸುವುದು.

(ಬಿ) ಡಿಪ್ಲೋಮ್/ಪೋಸ್ಟ್ ಡಿಪ್ಲೋಮ/ಅಂಡರ್ ಗ್ರಾಜುಯೇಟ್ ಡಿಗ್ರಿ/ಪೋಸ್ಟ್ ಗ್ರಾಜುಯೇಟ್ ಡಿಗ್ರಿ/ಪೋಸ್ಟ್ ಗ್ರಾಜಯುಯೇಟ್ ಡಿಪ್ಲೋಮ ಹಂತಗಳಲ್ಲಿ ಇಂಜಿನಿಯರಿಂಗ್ ಮತ್ತು ಟೆಕ್ನಾಲಜಿ/ಫಾರ್ಮಸಿ/ಆರ್ಕಿಟೆಕ್ಚರ್/ಪ್ಲಾನಿಂಗ್/ಅಪ್ಲಾಯ್ಡ್ ಆರ್ಟ್ಸ್ ಮತ್ತು ಕ್ರಾಫ್ಟ್ಸ್/ಹೊಟೇಲ್ ಮ್ಯಾನೇಜ್‌ಮೆಂಟ್ ಮತ್ತು ಕೇಟರಿಂಗ್ ಟೆಕ್ನಾಲಜಿ/ಮ್ಯಾನೇಜ್‌ಮೆಂಟ್/ಎಂಸಿಎ ಪ್ರೊಗ್ರಾಮ್ಸ್ ನೀಡುತ್ತಿರುವ ವಿಶ್ವವಿದ್ಯಾಲಯ/ಮಂಡಳಿಯ ಮಾನ್ಯತೆ ಪಡೆದಿರುವ ಪ್ರಸ್ತುತ ಚಾಲ್ತಿಯಲ್ಲಿರುವ ತಾಂತ್ರಿಕ ಶಿಕ್ಷಣ ಸಂಸ್ಥೆಗಳು, "ತಮ್ಮ ನಿವೇಶನ/ಸ್ಥಳ ಬದಲಾವಣೆಗೆ/ಸಂಸ್ಥೆಯ ಬರ್ಖಾಸ್ತಿಗೆ/ಮಹಿಳಾ ಶಿಕ್ಷಣ ಸಂಸ್ಥೆಯನ್ನು ಸಹ–ಶಿಕ್ಷಣ ಸಂಸ್ಥೆಯನ್ನಾಗಿ ಬದಲಾಯಿಸಲು ಮತ್ತು ವೈಸ್‌ವರ್ಸಾ/ಡಿಪ್ಲೋಮ ಹಂತವನ್ನು ಡಿಗ್ರಿ ಹಂತಕ್ಕೆ ಮಾರ್ಪಡಿಸಲು ಮತ್ತು ವೈಸ್‌ವರ್ಸಾ/ಮಂಜೂರಾತಿ ವಿಸ್ತರಣೆಗೆ/ಹಿಂದಿನ ಶೈಕ್ಷಣಿಕ ವರ್ಷದಲ್ಲಿ ಕಳೆದುಕೊಂಡಿರುವ ಮಂಜೂರಾತಿಯನ್ನು ಮುಂದುವರಿಸಲು/ ರಿಸ್ಟೋರೇಶನ್/ಇಂಟೇಕ್ ಹೆಚ್ಚಳ/ಹೆಚ್ಚುವರಿ ಕೋರ್ಸ್(ಗಳು)/ಇಂಟಿಗ್ರೇಟೆಡ್/ಡ್ಯೂಯಲ್ ಡಿಗ್ರಿ ಕೋರ್ಸ್ ಸೇರ್ಪಡೆಗೆ/ಡಿಗ್ರಿ ಫಾರ್ಮಸಿ ಶಿಕ್ಷಣ ಸಂಸ್ಥೆಗಳಲ್ಲಿ ಡಿಪ್ಲೋಮ ಆರಂಭಿಸಲು ಮತ್ತು ವೈಸ್‌ವರ್ಸಾ/ಫಾರ್ಮಾ.ಡಿ. ಕೋರ್ಸ್ ಪರಿಚಯಿಸಲು/ಮ್ಯಾನೇಜ್‌ಮೆಂಟ್ ಸಂಸ್ಥೆಗಳು ನಡೆಸುತ್ತಿರುವ ಪಿಜಿಡಿಎಂ ಕೋರ್ಸ್ ಅನ್ನು ಎಂಬಿಎ ಕೋರ್ಸನ್ನಾಗಿ ಮಾರ್ಪಡಿಸಲು/ಸೆಕಂಡ್ ಶಿಫ್ಟ್ ಕೋರ್ಸ್(ಗಳು) ಅನ್ನು ಫರ್ಸ್ಟ್ ಶಿಫ್ಟ್ ಕೋರ್ಸ್(ಗಳು) ಅನ್ನಾಗಿ ಪರಿವರ್ತಿಸಲು/ಅರೆಕಾಲಿಕ ಕೋರ್ಸ್(ಗಳ) ಅನ್ನು ಪರಿಚಯಿಸಲು/ಮ್ಯಾನೇಜ್‌ಮೆಂಟ್‌ನಲ್ಲಿ ಫೆಲೋಶಿಪ್ ಪ್ರೊಗ್ರಾಮ್ ಪರಿಚಯಿಸಲು/ಗಲ್ಫ್ ದೇಶಗಳಲ್ಲಿ ಭಾರತೀಯ ಉದ್ಯೋಗಿಗಳ ಮಕ್ಕಳಿಗಾಗಿ/ವಿದೇಶಿ ನಾಗರಿಕರಿಗಾಗಿ/ಪಿಐಒ/ಒಸಿಐ ಗಳಿಗಾಗಿ ಸೂಪರ್‌ನ್ಯೂಮರಿ ಸೀಟ್‌ಗಳ ಮುಂದುವರಿಕೆಗಾಗಿ/ಎನ್‌ಆರ್‌ಐ ನಾಗರಿಕರ ಗಂಡುಮಕ್ಕಳು/ಹೆಣ್ಣುಮಕ್ಕಳಿಗಾಗಿನ ಸೀಟ್‌ಗಳ ಮುಂದುವರಿಕೆಗಾಗಿ/ಕೋರ್ಸ್(ಗಳ) ಹೆಸರು ಬದಲಾವಣೆಗಾಗಿ/ಇಂಟೇಕ್ ಕಡಿತಗೊಳಿಸಲು/ಕಾರ್ಯಕ್ರಮ(ಗಳ) ಅನ್ನು ಮತ್ತು/ಅಥವಾ ಕೋರ್ಸ್(ಗಳು) ಅನ್ನು ಬರ್ಖಾಸ್ತುಗೊಳಿಸಲು/ಸಂಸ್ಥೆಯ, ಅಥವಾ ಅಫಿಲಿಯೇಟಿಂಗ್ ವಿಶ್ವಿವಿದ್ಯಾಲಯ/ಮಂಡಳಿಯ ಹೆಸರು ಬದಲಾವಣೆಗೆ/ಟ್ರಸ್ಟ್/ಸೊಸೈಟಿ/ಕಂಪನಿಯ ಹೆಸರು ಬದಲಾವಣೆ (ಮರ್ಜಿಂಗ್ ಕೂಡ ಸೇರಿದಂತೆ)/ ಪರಿಚಯ/ಟ್ವಿನ್ನಿಂಗ್ ಮತ್ತು ಕೊಲ್ಯಾಬೊರೇಶನ್ ಪ್ರೊಗ್ರಾಮ್‌ನ ಮುಂದುವರಿಕೆಗೆ" ಅರ್ಜಿ ಸಲ್ಲಿಸುವುದು.

(ಸಿ) ಪ್ರಸ್ತುತ ಡಿಪ್ಲೋಮ/ಅಂಡರ್ ಗ್ರಾಜುಯೇಟ್ ಡಿಗ್ರಿ ಹಂತಗಳಲ್ಲಿ ಟೆಕ್ನಿಕಲ್ ಪ್ರೊಗ್ರಾಮ್ಸ್ ನೀಡುತ್ತಿರುವ ಮತ್ತು ಬೋರ್ಡ್/ಯುನಿವರ್ಸಿಟಿ ಜೊತೆಗೆ ಅಫಿಲಿಯೇಟ್ ಹೊಂದಿರುವ ಶಿಕ್ಷಣ ಸಂಸ್ಥೆಗಳು, ಎನ್‌ಎಸ್‌ಕ್ಯೂಎಫ್ ಅಡಿಯಲ್ಲಿ ವೊಕೇಶನಲ್ ಎಜುಕೇಶನ್‌ನಲ್ಲಿ ಡಿಪ್ಲೋಮ/ಡಿಗ್ರಿ ಹಂತದಲ್ಲಿ ವೊಕೇಶನಲ್ ಎಜುಕೇಶನ್ ಪ್ರೊಗ್ರಾಮ್ಸ್ ಪರಿಚಯಿಸಲು ಅರ್ಜಿ ಸಲ್ಲಿಸುವುದು.

(ಡಿ) ಮೇಲ್ಕಾಣಿಸಿದ ಎಲ್ಲಾ ಮಂಜೂರಾತಿಗೆ ಸಂಬಂಧಿಸಿದಂತೆ **2018–19ನೇ ಸಾಲಿನ ಅವಧಿಗಾಗಿ ಆನ್‌ಲೈನ್ ಅರ್ಜಿಗಳ ಸಲ್ಲಿಕೆಯು ಜನವರಿ 01, 2018 ರಿಂದ ಆರಂಭವಾಗುತ್ತದೆ** ಮತ್ತು **ಜನವರಿ 31, 2018 ರಂದು ಕೊನೆಗೊಳ್ಳುತ್ತದೆ.** ದಂಡ ಶುಲ್ಕ ಸಮೇತ ಮಂಜೂರಾತಿ ವಿಸ್ತರಣೆಗಾಗಿ ಅರ್ಜಿ ಸಲ್ಲಿಸಲು, ಪ್ರಸ್ತುತ ಚಾಲ್ತಿಯಲ್ಲಿರುವ ಶಿಕ್ಷಣ ಸಂಸ್ಥೆಗಳಿಗೆ ಮಾತ್ರ (ಎಪಿಎಚ್ 2018–19 ನಿಯಮಗಳ ಮೇರೆಗೆ) **ಫೆಬ್ರವರಿ 05, 2018** ರವರೆಗೆ ಅವಕಾಶ ನೀಡಲಾಗಿರುತ್ತದೆ. ಇನ್ನು ಮುಂದೆ ಯಾವುದೇ ಕಾರಣಕ್ಕೂ ದಿನಾಂಕ ವಿಸ್ತರಣೆ ಮಾಡಲಾಗುವುದಿಲ್ಲ ಎಂಬುದು ಗಮನದಲ್ಲಿರಲಿ.

(ಇ) ಮೇಲ್ಕಾಣಿಸಿದ ಎಲ್ಲಾ ಮಂಜೂರಾತಿಗಳಿಗೆ ಸಂಬಂಧಿಸಿದಂತೆ **2018–19ನೇ ಸಾಲಿನ ಅವಧಿಗೆ ಆನ್‌ಲೈನ್‌ನಲ್ಲಿ ಸಲ್ಲಿಕೆಗೊಂಡ ಎಲ್ಲಾ ಅರ್ಜಿಗಳ ಸಂಸ್ಕರಣೆಯನ್ನು ಫೆಬ್ರವರಿ 01, 2018 ರಂದು ಆರಂಭಿಸಲಾಗುತ್ತದೆ ಮತ್ತು ಏಪ್ರಿಲ್ 10, 2018 ರಂದು ಕೊನೆಗೊಳಿಸಲಾಗುತ್ತದೆ.**

**2018–19ನೇ ಸಾಲಿನ ಶೈಕ್ಷಣಿಕ ಅವಧಿಗಾಗಿ** ಎಐಸಿಟಿಇ ರವರ **www.aicte-india.org** ವೆಬ್ ಪೋರ್ಟಲ್‌ನಲ್ಲಿ ಅರ್ಜಿ ಸಲ್ಲಿಸುವ ಎಲ್ಲಾ ಅರ್ಜಿದಾರರು, ತಮ್ಮ ಅರ್ಜಿ ಸಲ್ಲಿಸುವುದಕ್ಕೂ ಮುನ್ನವೇ, ಎಐಸಿಟಿಇ ಮಂಜೂರಾತಿ ಪ್ರಕ್ರಿಯೆ ಕೈಪಿಡಿ 2018–19, ಅಖಿಲ ಭಾರತ ತಾಂತ್ರಿಕ ಶಿಕ್ಷಣ ಮಂಡಳಿ (ತಾಂತ್ರಿಕ ಶಿಕ್ಷಣ ಸಂಸ್ಥೆಗೆ ಮಂಜೂರಾತಿ ಅನುಮೋದನೆ) ನಿಯಮಗಳು, 2016 ಮತ್ತು 1ನೇ ತಿದ್ದುಪಡಿ, 2017 ಗಳನ್ನು ಜಾಗ್ರತೆಯಿಂದ ಸಂಪೂರ್ಣವಾಗಿ ಓದಿಕೊಳ್ಳಬೇಕೆಂದು ವಿನಂತಿಸಲಾಗಿದೆ.

ಜಾಹೀರಾತು ಸಂ : Approval/12(03)/2017

**ಸದಸ್ಯ ಕಾರ್ಯದರ್ಶಿ, ಎಐಸಿಟಿಇ**

ಗುರುವಾರ, ಡಿಸೆಂಬರ್ 21, 2017 | ಮಂಗಳೂರು | ₹ 5.00 | ಸಂಪುಟ 19 | ಸಂಚಿಕೆ 351 | ಪುಟ 22 + 4 + 2
www.prajavani.net
f/prajavani.net @p
ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ
ಕಾಮನಬಿಲ್ಲು ಇದು ಮೊಬೈಲ್ ಯುಗ ಸ್ವಾಮಿ...
ಲವ್ ಜಿಹಾದ್ ತಡೆಗೆ ಹಿಂದೂ ಕಾರ್ಯಪಡೆ 5
ಜನವರಿ ಎರಡನೇ ವಾರದಿಂದ ಶಿರಾಡಿ ರಸ್ತೆ ಬಂದ್ 7

| ಸೆನ್ಸೆಕ್ಸ್ | ನಿಫ್ಟಿ | ಚಿನ್ನ (Std. 10g) | ಶುದ್ಧ ಬೆಳ್ಳಿ (kg) | ₹/$ |
|---|---|---|---|---|
| 33,777 | 10,444 | ₹28,796 (ಬೆಂಗಳೂರು) | ₹37,600 (ಬೆಂಗಳೂರು) | 64.11 |

CENTRAL LIBRARY

### ಆರು ವರ್ಷಗಳಿಂದ ಲೆಕ್ಕಪರಿಶೋಧನೆ ಬಾಕಿ

# ಎಂಜಿನಿಯರಿಂಗ್ ಕಾಲೇಜುಗಳಿಗೆ ಬಿಡುಗಡೆಯಾಗದ ಅನುದಾನ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಅನುದಾನಿತ ಎಂಜಿನಿಯರಿಂಗ್ ಮತ್ತು ಪಾಲಿಟೆಕ್ನಿಕ್ ಕಾಲೇಜಗಳ ಲೆಕ್ಕ ಪರಿಶೋಧನೆ (ಆಡಿಟ್) ಹಲವು ವರ್ಷಗಳಿಂದ ಬಾಕಿ ಇದ್ದು, ಸರ್ಕಾರದಿಂದ ನೀಡಬೇಕಾದ ಹಣ ಬಿಡುಗಡೆಯಾಗದೆ ಕಾಲೇಜುಗಳು ತೊಂದರೆ ಅನುಭವಿಸುವಂತಾಗಿದೆ.

ರಾಜ್ಯದಲ್ಲಿ ಅನುದಾನಕ್ಕೊಳಪಟ್ಟ 44 ಪಾಲಿಟೆಕ್ನಿಕ್ ಮತ್ತು 10 ಎಂಜಿನಿಯರಿಂಗ್ ಕಾಲೇಜುಗಳಿವೆ. ಪಾಲಿಟೆಕ್ನಿಕ್ ಕಾಲೇಜುಗಳಲ್ಲಿನ ಸಿಬ್ಬಂದಿಗೆ ಸರ್ಕಾರ ಶೇ 100ರಷ್ಟು ಹಾಗೂ ಎಂಜಿನಿಯರಿಂಗ್ ಕಾಲೇಜುಗಳ ಸಿಬ್ಬಂದಿಯ ಶೇ 85ರಷ್ಟು ವೇತನವನ್ನು ಸರ್ಕಾರ ನೀಡುತ್ತಿದೆ.

'ತಾಂತ್ರಿಕ ಶಿಕ್ಷಣ ಇಲಾಖೆ ಪ್ರತಿ ವರ್ಷ ಆಡಿಟ್ ನಡೆಸದಿರುವುದರಿಂದ ಮುಖ್ಯವಾಗಿ ಎಂಜಿನಿಯರಿಂಗ್ ಕಾಲೇಜುಗಳಿಗೆ ಸರ್ಕಾರದಿಂದ ಬರಬೇಕಾದ ಕೋಟ್ಯಂತರ ರೂಪಾಯಿ ಬರುತ್ತಿಲ್ಲ. ನಾಲ್ಕೈದು ವರ್ಷಗಳಿಂದಲೂ ಆಡಿಟ್ ಬಾಕಿ ಇದೆ. ಇದರಿಂದ ಕಾಲೇಜು ನಡೆಸುವುದು ಕಷ್ಟವಾಗಿದೆ' ಎಂದು ಕಾಲೇಜುಗಳ ಮುಖ್ಯಸ್ಥರು ಬೇಸರ ವ್ಯಕ್ತಪಡಿಸುತ್ತಿದ್ದಾರೆ.

2012-13ರಲ್ಲಿ ಒಂದು, 2013-14ರಲ್ಲಿ ಐದು ಮತ್ತು 2015-16ರಲ್ಲಿ ಎರಡು ಎಂಜಿನಿಯರಿಂಗ್ ಕಾಲೇಜುಗಳ ಆಡಿಟ್ ಬಾಕಿ ಇದೆ ಎಂದು ತಾಂತ್ರಿಕ ಶಿಕ್ಷಣ ಇಲಾಖೆ ಅಧಿಕೃತ ಮಾಹಿತಿ ನೀಡಿದೆ.

**ಉಳಿದ ಬಾಕಿ:** ಸರ್ಕಾರಿ ನೌಕರರಿಗೆ ತುಟ್ಟಿಭತ್ಯೆ ಘೋಷಣೆಯಾದಾಗ ಮೂರ್ನಾಲ್ಕು ತಿಂಗಳ ಬಾಕಿಯನ್ನು ಕಾಲೇಜುಗಳು ನೌಕರರಿಗೆ ಪಾವತಿಸಿವೆ. ಇದಲ್ಲದೆ, ಸರ್ಕಾರದಿಂದ ಅನುದಾನ ಬಿಡುಗಡೆಯಾಗುವ ಮುನ್ನವೇ ಗಳಿಕೆ ರಜೆಯನ್ನೂ ಸಹ ನೌಕರರಿಗೆ ಪಾವತಿ ಮಾಡಲಾಗುತ್ತದೆ. ಕಾಲೇಜಿನ ವ್ಯವಹಾರಗಳನ್ನು ಪ್ರತಿ ವರ್ಷ ಆಡಿಟ್ ನಡೆಸಿ ವರದಿ ನೀಡಿದ ಬಳಿಕವಷ್ಟೇ ಈ ಹಣ ಸರ್ಕಾರದಿಂದ ಕಾಲೇಜುಗಳಿಗೆ ವರ್ಗವಾಗುತ್ತದೆ. ಆದರೆ, ಆಡಿಟ್ ಆಗದಿರುವುದರಿಂದ ಐದಾರು ವರ್ಷಗಳಲ್ಲಿ ₹3 ಕೋಟಿಗೂ ಹೆಚ್ಚು ಮೊತ್ತ ಸರ್ಕಾರದಿಂದ ಬಂದಿಲ್ಲ ಎಂದು ಹೆಸರು ಬಹಿರಂಗಪಡಿಸಲು ಇಚ್ಛಿಸದ ಕಾಲೇಜಿನ ಮುಖ್ಯಸ್ಥರೊಬ್ಬರು ಹೇಳಿದರು.

ಅಲ್ಲದೆ, ಆಡಿಟ್ ನಡೆಸಲು ಅಧಿಕಾರಿಗಳನ್ನು ಕಳುಹಿಸುವಂತೆ ತಾಂತ್ರಿಕ ಶಿಕ್ಷಣ ನಿರ್ದೇಶಕರ ಕಚೇರಿಗೆ ಪತ್ರ ಬರೆದಾಗ ಆಡಿಟ್ ವಿಭಾಗದವರು ನೇರವಾಗಿ ಬಂದು ಕಾಣುವಂತೆ ಹೇಳುತ್ತಾರೆ. ಅದರ ಅಗತ್ಯವೇನು ಎಂದೂ ಅವರು ಪ್ರಶ್ನಿಸಿದರು.

**ಲೆಕ್ಕಪರಿಶೋಧಕರ ಕೊರತೆ:** 'ಅನುದಾನಿತ ಕಾಲೇಜುಗಳ ಆಡಿಟ್ ಮಾಡುವುದಕ್ಕಾಗಿ ಮೂರು ಲೆಕ್ಕ ಅಧೀಕ್ಷಕರ ಹುದ್ದೆಗಳಿವೆ. ಅದರಲ್ಲಿ ಹಣಕಾಸು ಇಲಾಖೆ ಇಬ್ಬರನ್ನು ಮಾತ್ರ ಕಳುಹಿಸಿದೆ. ಅವರ ಜೊತೆಗೆ ನಮ್ಮ ಇಲಾಖೆಯ ಇಬ್ಬರು ಅಥವಾ ಮೂವರು ಸಿಬ್ಬಂದಿಯನ್ನು ಸಹಾಯಕರಾಗಿ ಕೊಡಬೇಕು. ಅಗತ್ಯ ಸಿಬ್ಬಂದಿ ಕೊರತೆಯಿಂದ ಕಾಲಕಾಲಕ್ಕೆ ಲೆಕ್ಕಪರಿಶೋಧನೆ ಸಾಧ್ಯವಾಗುತ್ತಿಲ್ಲ' ಎಂದು ತಾಂತ್ರಿಕ ಶಿಕ್ಷಣ ಇಲಾಖೆ ನಿರ್ದೇಶಕ ಎಚ್.ಯು. ತಳವಾರ ಹೇಳಿದರು.

ಈ ಕಾಲೇಜುಗಳ ಸಿಬ್ಬಂದಿಗೆ ಸರ್ಕಾರ ನೀಡುವ ವೇತನದಲ್ಲಿ ಯಾವುದೇ ತೊಂದರೆ ಆಗಿಲ್ಲ. ಎಂಜಿನಿಯರಿಂಗ್ ಮತ್ತು ಪಾಲಿಟೆಕ್ನಿಕ್ ಸೇರಿ 4,000 ಸಿಬ್ಬಂದಿಗೆ ವೇತನ ನೀಡಲು 2017-18ನೇ ಸಾಲಿಗೆ ₹358 ಕೋಟಿ ನಿಗದಿ ಪಡಿಸಲಾಗಿದೆ ಎಂದು ಹೇಳಿದರು.



ತಾಂತ್ರಿಕ ಶಿಕ್ಷಣ ಇಲಾಖೆ

### ಮುಖ್ಯಾಂಶಗಳು

- 44 ಪಾಲಿಟೆಕ್ನಿಕ್ ಮತ್ತು 10 ಎಂಜಿನಿಯರಿಂಗ್ ಕಾಲೇಜುಗಳು
- ನಾಲ್ಕೈದು ವರ್ಷಗಳಿಂದಲೂ ಆಡಿಟ್ ನಡೆಸದ ತಾಂತ್ರಿಕ ಶಿಕ್ಷಣ ಇಲಾಖೆ
- ಸರ್ಕಾರದಿಂದ ಮಂಜೂರಾಗದ ₹3 ಕೋಟಿ

### ಆಡಿಟ್ ಬಾಕಿ ಇರುವ ಕಾಲೇಜುಗಳ ವಿವರ

| ವರ್ಷ | ಎಂಜಿನಿಯರಿಂಗ್ | ಪಾಲಿಟೆಕ್ನಿಕ್ |
|---|---|---|
| 2012-13 | - | 2 |
| 2013-14 | 1 | 07 |
| 2014-15 | 5 | 17 |
| 2015-16 | 2 | 14 |

### ಲಿಖಿತ ದೂರು ನೀಡಲಿ– ತಳವಾರ

'ಆಡಿಟ್ ಮಾಡಲು ಕಾಲೇಜಿಗೆ ಬರಬೇಕಾದರೆ ಕಚೇರಿಗೆ ಬಂದು ಕಾಣುವಂತೆ ಲೆಕ್ಕ ಅಧೀಕ್ಷಕರು ಹೇಳುತ್ತಿದ್ದರೆ ಅದು ತಪ್ಪು. ಈ ಬಗ್ಗೆ ಕಾಲೇಜುಗಳು ಲಿಖಿತ ದೂರು ನೀಡಿದರೆ ಅವರನ್ನು ಮಾತೃ ಇಲಾಖೆಗೆ ವಾಪಸ್ ಕಳುಹಿಸಲಾಗುವುದು' ಎಂದು ತಳವಾರ ಹೇಳಿದರು.

ಬಾಕಿ ಉಳಿದಿರುವ ಕಾಲೇಜುಗಳ ಆಡಿಟ್ ನಡೆಸಲು ವಿಶೇಷ ತಂಡಗಳನ್ನು ರಚಿಸಲು ಸೂಚಿಸಲಾಗಿದೆ. ಅವರಿಗೆ ಕಾಲಮಿತಿ ನಿಗದಿ ಮಾಡಿ ಇಂತಿಷ್ಟು ದಿನಗಳಲ್ಲಿ ಮುಗಿಸಬೇಕು ಎಂದೂ ಸೂಚಿಸಲಾಗುವುದು ಎಂದು ಅವರು ವಿವರಿಸಿದರು.

ಗುರುವಾರ 21.12.2017
ಬೆಂಗಳೂರು • ಬೆಳಗಾವಿ • ಶಿವಮೊಗ್ಗ • ಹುಬ್ಬಳ್ಳಿ • ಮಂಗಳೂರು • ಕಲಬುರಗಿ
51 ವರ್ಷ • ಸಂಚಿಕೆ 351 • ಪುಟ 12+4 • ಬೆಲೆ ₹5
epaper.kannadaprabha.in

ಕಾಂಗ್ರೆಸ್ ಸಂಸದೀಯ ನಾಯಕ ಪಟ್ಟವೂ ರಾಹುಲ್‌ಗೆ? 9

ಸ್ಪೆಷಲ್!

ಬಿಟ್‌ಕಾಯಿನ್‌ನಲ್ಲೂ ಭ
ಲಾಭ ಗಳಿಸಿದ ಅಮಿ

ಕನ್ನಡಪ್ರಭ
ನೇರ.ದಿಟ್ಟ.ನಿರಂತರ

CENTRAL LIBRARY

ಪುರವಣಿಯಲ್ಲಿ




2017ನೇ ಇಸ್ವಿ ಮು
ಹಿನ್ನೆಲೆಯಲ್ಲಿ ಈ ವ
ಘಟನಾವಳಿಗಳನ್ನು
ಮೆಲುಕು ಹಾಕುವ
ಇಂದಿನಿಂದ ಆರಂಭ
ಶೃಂಗಾರದ ಮೆಲು

**ಸಮಸ್ಯೆ ಪರಿಹಾರ** ವೃತ್ತಿ ಶಿಕ್ಷಣ ಸಂಸ್ಥೆಗಳ ಕಾಯ್ದೆ ತಿದ್ದುಪಡಿಗೆ ಸರ್ಕಾರದ ಚಿಂತನೆ | ಹಳೆ ಸೀಟು ಕೈತಪ್ಪಿ, ಹೊಸ ಸೀಟಿಗೆ ಪ್ರವೇಶ ಸಿಗದೆ ಪರದಾಡುತ್ತಿದ್ದವರಿಗೆ ನೆರವು

# ನೀಟ್ ಪಾಸಾದ್ರೂ ಹಳೆ ಸೀಟು ರದ್ದಾಗದಂತೆ ವ್ಯವಸ್ಥೆ

## ಏನಿದು ಸಮಸ್ಯೆ?

- ಆ.15ರೊಳಗೆ ಎಂಜಿನಿಯರಿಂಗ್, ಆ.31ರೊಳಗೆ ವೈದ್ಯಕೀಯ ಕೋರ್ಸುಗಳಿಗೆ ಪ್ರವೇಶ ಪರೀಕ್ಷೆ ನಡೆಯುತ್ತದೆ.
- ಸಿಇಟಿ ಬರೆವ ವಿದ್ಯಾರ್ಥಿಗಳು ಅಲ್ಲಿ ಸೀಟು ಸಿಕ್ಕರೆ ವಿವಿಧ ಕೋರ್ಸುಗಳಿಗೆ ಪ್ರವೇಶ ಪಡೆಯುತ್ತಾರೆ.
- ವೈದ್ಯ, ದಂತ ವೈದ್ಯ ಕೌನ್ಸೆಲಿಂಗ್‌ನಲ್ಲಿ ಸೀಟು ದೊರೆತರೆ ಅದಕ್ಕೆ ವಿದ್ಯಾರ್ಥಿಗಳು ಪ್ರವೇಶ ಪಡೆಯಲೇಬೇಕು. ಹಿಂದಿನ ಸೀಟು ರದ್ದಾಗುತ್ತದೆ.
- ವೈದ್ಯ ಸೀಟಿಗೆ ಹಣ ಹೊಂದಿಸಲು ಕಷ್ಟವಾಗಿ, ಹಿಂದೆ ಪ್ರವೇಶ ಪಡೆದಿದ್ದ ಕೋರ್ಸಿನಲ್ಲೇ ವ್ಯಾಸಂಗ ಮುಂದುವರಿಸಲು ಆಗುವುದಿಲ್ಲ.

• **ಎನ್.ಎಲ್.ಶಿವಮಾದು** ಬೆಂಗಳೂರು

ಕರ್ನಾಟಕ ವೃತ್ತಿ ಶಿಕ್ಷಣ ಸಂಸ್ಥೆಗಳ (ಪ್ರವೇಶ ನಿಯಂತ್ರಣ ಮತ್ತು ಶುಲ್ಕ ನಿಗದಿ) ಅಧಿನಿಯಮ 2006ರ ನಿಯಮಗಳಲ್ಲಿರುವ ಕೆಲ ಲೋಪದೋಷಗಳಿಂದ ವಿದ್ಯಾರ್ಥಿಗಳು ವೃತ್ತಿಪರ ಕೋರ್ಸ್‌ನಿಂದ ವಂಚಿತರಾಗುತ್ತಿರುವ ಹಿನ್ನೆಲೆಯಲ್ಲಿ ನಿಯಮ ತಿದ್ದುಪಡಿಗೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ಮುಂದಾಗಿದೆ.

ಪ್ರಸ್ತುತ 'ರಾಷ್ಟ್ರೀಯ ಅರ್ಹತೆ ಮತ್ತು ಪ್ರವೇಶ ಪರೀಕ್ಷೆ' (ನೀಟ್) ಬರೆಯುವ ವಿದ್ಯಾರ್ಥಿಗಳು ಕೌನ್ಸೆಲಿಂಗ್‌ವರೆಗೂ ಕಾಯದೆ, ಅದಕ್ಕೂ ಮೊದಲೇ ಕೌನ್ಸೆಲಿಂಗ್ ನಡೆಯುವ ಎಂಜಿನಿಯರಿಂಗ್ ಅಥವಾ ಕೃಷಿ ಸೇರಿದಂತೆ ವಿವಿಧ ಕೋರ್ಸ್‌ಗಳಿಗೆ ಪ್ರವೇಶ ಪಡೆಯುತ್ತಾರೆ. ಒಂದು ವೇಳೆ ನೀಟ್ ಕೌನ್ಸೆಲಿಂಗ್‌ನಲ್ಲಿ ಸೀಟು ಖಾತ್ರಿಯಾದರೆ ಈಗಾಗಲೇ ಸೇರಿರುವ ಕೋರ್ಸ್ ಬಿಟ್ಟು ಮೆಡಿಕಲ್ ಅಥವಾ ದಂತ ವೈದ್ಯಕೀಯ ಕೋರ್ಸ್‌ಗೆ ಪ್ರವೇಶ ಪಡೆಯಬೇಕಿದೆ.

ಕೆಇಎ ನಿಯಮದ ಪ್ರಕಾರ ಹಿಂದಿನ



ಸೀಟುಗಳು ರದ್ದಾಗಲಿವೆ. ವಿದ್ಯಾರ್ಥಿಗಳು ಅನಿವಾರ್ಯವಾಗಿ ವೈದ್ಯಕೀಯ ಸೀಟು ಪಡೆಯಬೇಕಿದೆ. ಇಂತಹ ನಿಯಮ ಕೆಲವು ಬಡ ವಿದ್ಯಾರ್ಥಿಗಳಿಗೆ ಮಾರಕವಾಗಿದೆ. ವೈದ್ಯಕೀಯ ಕೋರ್ಸ್‌ಗಳಿಗೆ ಪ್ರವೇಶ ಶುಲ್ಕ ಪಾವತಿಸಲು ಸಾಧ್ಯವಾಗದೆ ಅಥವಾ ಈಗಾಗಲೇ ಪ್ರವೇಶ ಪಡೆದಿರುವ ಕೋರ್ಸ್‌ನಲ್ಲಿಯೇ ಮುಂದುವರಿಯುವ ಇಚ್ಛೆ ವ್ಯಕ್ತಪಡಿಸಲು ಸಾಧ್ಯವಾಗುತ್ತಿಲ್ಲ. ಬೇರೆ ದಾರಿ ಇಲ್ಲದೆ ವೈದ್ಯಕೀಯ ಕೋರ್ಸ್‌ಗಳಿಗೆ ಪ್ರವೇಶ ಪಡೆಯಬೇಕು ಅಥವಾ ಒಂದು ವರ್ಷ ಅವಧಿಯನ್ನು ನಷ್ಟ ಮಾಡಿಕೊಳ್ಳಬೇಕಿದೆ.


> ಶೈಕ್ಷಣಿಕ ವಲಯದಲ್ಲಿನ ಬೆಳವಣಿಗೆಗೆ ಅನುಗುಣವಾಗಿ ತಾಂತ್ರಿಕವಾಗಿ ಒಂದು ದಶಕದಲ್ಲಿ ಸಾಕಷ್ಟು ಬದಲಾವಣೆಯಾಗಿವೆ. ವಿದ್ಯಾರ್ಥಿಗಳಿಗೆ ಯಾವುದೇ ರೀತಿಯಲ್ಲಿ ತೊಂದರೆ ಎದುರಾಗದಂತೆ ನಿಯಮಗಳನ್ನು ತಿದ್ದುಪಡಿಗೊಳಿಸುವ ಕುರಿತು ಚಿಂತನೆ ನಡೆಯುತ್ತಿದೆ.
>
> • **ಗಂಗಾಧರಯ್ಯ** ಕೆಇಎ ಆಡಳಿತಾಧಿಕಾರಿ

ಸರ್ಕಾರದ ಈ ನಿಯಮಕ್ಕೆ ವಿದ್ಯಾರ್ಥಿಗಳಿಂದ ಸಾಕಷ್ಟು ವಿರೋಧ ವ್ಯಕ್ತವಾದ ಹಿನ್ನೆಲೆಯಲ್ಲಿ ಕರ್ನಾಟಕ ವೃತ್ತಿ ಶಿಕ್ಷಣ ಸಂಸ್ಥೆಗಳ ಅಧಿನಿಯಮ 2006ಕ್ಕೆ ತಿದ್ದುಪಡಿ ತರುವ ಮೂಲಕ ವಿದ್ಯಾರ್ಥಿ ಬಯಸಿದ ಕೋರ್ಸ್‌ನಲ್ಲೇ ವ್ಯಾಸಂಗ ಮಾಡುವುದಕ್ಕೆ ಅವಕಾಶ ಕಲ್ಪಿಸಿಕೊಡಲು ಸರ್ಕಾರ ಮುಂದಾಗಿದೆ.

**ಸದ್ಯದ ಪ್ರವೇಶ ಪ್ರಕ್ರಿಯೆ:** ಸುಪ್ರೀಂಕೋರ್ಟ್ ಆದೇಶದ ಪ್ರಕಾರ ಆಗಸ್ಟ್ 15ರೊಳಗೆ ಎಂಜಿನಿಯರಿಂಗ್ ಹಾಗೂ ಆಗಸ್ಟ್ 31ರೊಳಗೆ ವೈದ್ಯಕೀಯ ಪ್ರವೇಶ ಪ್ರಕ್ರಿಯೆ ಪೂರ್ಣಗೊಳಿಸಬೇಕಿದೆ. ಈ ಹಿನ್ನೆಲೆಯಲ್ಲಿ ಪ್ರತಿ ಬಾರಿ ಸಿಇಟಿ ಬರೆಯುವ ವಿದ್ಯಾರ್ಥಿಗಳು ವೈದ್ಯ ಮತ್ತು ದಂತ ವೈದ್ಯಕೀಯ ಕೋರ್ಸ್ ಹೊರತುಪಡಿಸಿ ಉಳಿದ ತಮ್ಮ ಆಯ್ಕೆಯ ಕೋರ್ಸ್‌ಗಳಿಗೆ ಪ್ರವೇಶ ಪಡೆಯುತ್ತಾರೆ. ನಂತರ ನೀಟ್ ಮೊದಲ ಅಥವಾ ಎರಡನೇ ಸುತ್ತಿನಲ್ಲಿ ವೈದ್ಯಕೀಯ ಸೀಟು ದೊರೆತರೆ ದುಬಾರಿ ಶುಲ್ಕ ಪಾವತಿಸಿ ಅದಕ್ಕೆ ಪ್ರವೇಶ ಪಡೆಯಲೇಬೇಕು. ಕೆಲವರಿಗೆ ಅದು ಸಾಧ್ಯವಾಗುವುದಿಲ್ಲ. ಹಾಗಂತ ಅವರಿಗೆ ಹಿಂದಿನ ಕೋರ್ಸ್‌ನಲ್ಲಿಯೇ ವ್ಯಾಸಂಗ ಮುಂದುವರಿಸಬೇಕು ಎಂದರೆ ಅದೂ ಸಾಧ್ಯವಿಲ್ಲ. ಏಕೆಂದರೆ ಆ ಸೀಟು ರದ್ದಾಗಿರುತ್ತದೆ.

CENTRAL LIBRARY

DH
DECCAN HERALD
Mangaluru, Thursday December 21, 2017
Pages 20 Vol 20 No 351 ₹6.00 M www.deccanherald.com




**Rahul helps India win by 93 runs** Page 16



Jus
Ka
rel
fro
Natio



Nas
stu
of
mis
hu
Cutti

# Nursing colleges' body wants lists of all states removed from Council portal

Meghana Choukkar

**BENGALURU: In a continuing legal battle, the Karnataka State Association of the Managements of Nursing and Allied Health Science Institutions plans to file an affidavit before the High Court in January, seeking directions to the Indian Nursing Council to remove lists of colleges of all states from its website.**

On November 15, the INC had published a list of schools/ colleges of nursing under Sections 13 and 14 of the Indian Nursing Council Act, 1947, offering various courses such as Auxiliary Nurse and Midwifery (ANM) and General Nursing and Midwifery (GNM). The list excluded the names of colleges in Karnataka.

The exclusion was made because of the verdict by a single bench of the Karnataka High Court on July 24 in a case between the Association and the INC. The judge had ruled that the Council did not have the authority to grant recognition to nursing institutes and had restrained it from publishing any material implying that recognition was to be obtained.

The Council challenged the judgement before a division bench, which ruled that though it was not authorised to recognise institutions, they could publish information. The Association then approached the Supreme Court, which upheld the single judge order in September. Complying with the order, the Council removed the names of Karnataka colleges from the lists published on its website.

"For example, if a student in Manipur checks the website and sees that the names of Karnataka colleges are not in the list, there will be doubt in his or her mind. It will affect the reputation of institutions here. The Council should remove the names of colleges from all states," said S Shivakumar, president of the Association.

T Dileep Kumar, president of the INC, said they had removed the names of Karnataka institutions to avoid contempt of court.

He said they had not used the word 'recognition' in the list. Sections 13 and 14 of the INC Act give the Council the power to inspect the institutions. If they are not found to be up to the Council standards, the Council can decide that students of such institutes cannot work outside the state.

"The list we have put up is of those colleges which we have inspected and found suitable as per the Act. Karnataka has been excluded because of the court order. But our appeal in this case is pending before the two-judge bench of the Karnataka High Court," Kumar said.

After the vacation, in January, the Council intends to expedite the appeal.

**DH News Service**

## 'Students won't be affected'

Dileep Kumar, president of the INC, said the exclusion of Karnataka colleges will not affect the career prospects of students. The idea of putting up the list is only to ensure transparency, he said, adding that the case was still pending and would not affect students. Director of Medical Education Dr Sachidananda also said the recognition of state colleges and prospects of students who wish to work outside the state would not be affected.